<u>ಸಾಕ್ಷಿಯನ್ನು ದಿನಾಂಕ **01-07-2026** ರಂದು ಸತ್ಯಪ್ರಮಾಣ ಭೋಧಿಸಲಾಯಿತು.</u>

**<u>ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿಯ ಪರ ಶ್ರೀ ಎ ಕೆ ಪಿ ವಕೀಲರಿಂದಃ</u>**

ದಾವಾ ಪತ್ರವನ್ನು ನಾನು ಓದಿದ್ದೇನೆ. ನಾನು 2 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಇಂಗ್ಲೀಷ್ ನನಗೆ ಓದಲು, ಬರೆಯಲು ಬರುವುದಿಲ್ಲ. ಬಸಲಿಂಗಪ್ಪ ತಂದೆ ವಿರುಪಣ್ಣ ಎನ್ನುವವರು ವಾದಿಯ ತಂದೆಯಾಗಿರುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿ ತೀರಿಕೊಂಡಿದ್ದಾರೆ. 3 ನೇ ಪ್ರತಿವಾದಿಯ ವಾರಸುಧಾರರು ಪ್ರತಿವಾದಿ ನಂಃ 3(ಎ) ರಿಂದ 3(ಎಫ್) ಆಗಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಭಾಗ ಕೇಳುವ ಅಧಿಕಾರ ವಾದಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಈಗಾಗಲೇ 2005 ರಲ್ಲಿ ವಿಭಾಗ ಆಗಿರುತ್ತದೆ ಮತ್ತು ದಾವಾ ಆಸ್ತಿಯು ವಾದಿಯ ತಂದೆಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ಆದ್ದರಿಂದ ಅದರಲ್ಲಿ ಯಾವುದೇ ಹಕ್ಕು, ಅಧಿಕಾರ ವಾದಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಪ್ರತಿವಾದಿಗಳಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ, ಅದಕ್ಕೆ ಅನುಕೂಲವಾಗಲಿ ಎಂದು ನಾನು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯನ್ನು ಹಾಕುವ ಸಲುವಾಗಿ ವಾದ ಪತ್ರದಲ್ಲಿ ಸುಳ್ಳು ಅಂಶಗಳನ್ನು ಹುಟ್ಟಿಸಿಕೊಂಡು ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ.</u>

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಜಿ. ಬಿ. ಹಳ್ಯಾಕಾಯಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.